**ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು**

**ಸತ್ರ ಮೊಕದ್ದಮೆ ಸಂಖ್ಯೆ 26/2022**

ಚಾ.ಸಾಃ 17 ಪ್ರಾ.ಸಾಃ 07

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 24.12.2025

| | | |
|---|---|---|
| ಸಾಕ್ಷಿಯ ಹೆಸರು | : | ನಾಗರಾಜ |
| ತಂದೆಯ ಹೆಸರು | : | ಹನುಮಂತಪ್ಪ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ |
| ವಿಳಾಸ | : | ಅಸ್ಕಿಹಾಳ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಗಬ್ಬೂರು ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸುತ್ತಿರುವಾಗ ದಿನಾಂಕ 14.07.2021 ರಂದು ಚಾಸಾ-1 ರವರ ದೂರನ್ನು ಹೆಚ್.ಸಿ 259 ರವರ ಮೂಲಕ ಸ್ವೀಕರಿಸಿ, ಮೊಕದ್ದಮೆಯಾಗಿ ದಾಖಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಹೆಚ್.ಸಿ 259 ಇವರು ವಡಗೇರಾದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಾಸಾ-1 ರವರ ದೂರನ್ನು ಪಡೆದು ಹಾಜರು ಪಡಿಸಿದ್ದರು.

02. ಸಾಕ್ಷಿಯು ಗುರುತಿಸಿದ ಪ್ರ.ವ.ವರದಿಯನ್ನು **ನಿಪಿ.10** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು **ನಿಪಿ.10(ಎ)** ಮತ್ತು **ನಿಪಿ.9(ಬಿ)** ಎಂದು ಗುರುತಿಸಲಾಯಿತು.

03. ಮುಂದಿನ ತನಿಖೆಯನ್ನು ಚಾಸಾ-18 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಆರೋಪಿತರ ಪರ ಶ್ರೀ ಎಸ್.ವಾಯ್ ವಕೀಲರಿಂದ ಪಾಟೀ ಸವಾಲುಃ-**

04. ಎಸ್.ಹೆಚ್.ಡಿ ಯನ್ನು ಎಸ್.ಹೆಚ್.ಓ ಬರೆಯುತ್ತಾರೆ. ಈ ಪ್ರಕರಣದಲ್ಲಿ ಎಸ್.ಹೆಚ್.ಓ ರವರು ಎಂ.ಎಲ್.ಸಿಯನ್ನು ಪಡೆದಿದ್ದರು. ಮಃ02.50 ರ ಸಮಯದಲ್ಲಿ ನಮ್ಮ ಠಾಣೆಗೆ ಎಂ.ಎಲ್.ಸಿ ಬಂದಿತ್ತು. ಹೆಚ್.ಸಿ 259 ಆಸ್ಪತ್ರೆಗೆ ಹೋದ ಬಗ್ಗೆ ಎಸ್.ಹೆಚ್.ಡಿ ಯಲ್ಲಿ ನಮೂದು ಆಗಿದೆ. ದೂರನ್ನು ಗಣಕಿಕೃತ ಬೆರಳಚ್ಚು ಮಾಡಲಾಗಿತ್ತು. ದೂರನ್ನು ಆಸ್ಪತ್ರೆಯಲ್ಲಿ ಬೆರಳಚ್ಚು ಮಾಡಿಸಲಾಗಿತ್ತು.

05. ದೂರಿನಲ್ಲಿ ಆರೋಪಿತರ ಹೆಸರುಗಳು ನಮೂದು ಇಲ್ಲ ಎನ್ನುವುದು ನಿಜ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.